3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕಿಳಿಸಿ ವೊರಟು ಕೆತ್ತನೆ ಮಾಡಿಸುವದಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗಳಿಗೆ ಪ್ರತ್ಯೇಕವಾಗಿ ದರ ಟ್ಯಬಂದಕ್ಕೆ ಇಪ್ಪೈಂದು ದರ ನಮೂದಿಸಬೇಕು. ಮತ್ತು ಕೋರ್ಗೆ ರವಾನೆಗೆ ದರ ಟ್ಯಬಂದಕ್ಕೆ ಜಂಗಲ್ ಮೈಲಿ ಬಂದಕ್ಕೆ ಇಪ್ಪತ್ತುದರವೆಂತಲೂ ಮತ್ತು ಹೈ ರೋಡ್ ಮೈಲಿ ಬಂದಕ್ಕೆ ಇಪ್ಪತ್ತುದರವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಲ್ಲಾ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ವೊಂದಿಗೆ ಕಿಳಿಸಲ್ಪಡಬೇಕು. ಜಮೀನಿನಲ್ಲಿ ಜೆಗ ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ಬೇರಿನಲ್ಲಿ ಇರತಕ್ಕ ಮಣ್ಣು ಮತ್ತು ಕಲ್ಲುಚನ್ನಾಗಿ ತೆಗಿಯಲ್ಪಡಬೇಕು. ಮರಗಳ ಕಿಪ್ಪೆ ಮತ್ತು ಬಿಳಿ ಚಕ್ಕೆಯನ್ನು ಬಹಳ ಹುಷಾರಿನಿಂದ ವೊದಲು ಮಚ್ಚುಕತ್ತಿಯಿಂದ ಕೆತ್ತಿ ನಂತರ ವೊಳಗಿನ ಜೆಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಜೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳಿ ಮರ ಬಿಡಕೂಡದು. ಬುಕ್ಕಣಿ ಮತ್ತು ಜೆಗ ಇರತಕ್ಕ ಚಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿಯಾಗಿ ಜೆಗವುಳ್ಳ ಕಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ವೊರಟ ಕೆತ್ತನೆ ಮಾಡದೆ ಹಾಗೆಯೇ ಕೋರ್ಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಮಾಪತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಪ್ರತಿ ಮಾಹೆಯಲ್ಲೂ ಯಿಷ್ಟು ವೊತ್ತ ತಯಾರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ವೊತ್ತವನ್ನ ಖಂಡಿತವಾಗಿ ಕೋರ್ಗೆಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಮೊಕರರ್ರಾಡಲ್ಪಡುವ ಪೆನಾಲಿಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಿಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನ್ ತರೀಕ್ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಒಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಒಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಷರತ್ತುಗಳ ಮೇರೆ ನಡೆಯಲೂ ತಪ್ಪಿದಲ್ಲಿ ಕೇವಣೀ ವೊಬಲಗು ಸರಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಭೂಪಾ ಕಾಗದ್ದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಚೂನಾಯಿಸೋಣ, ಕಿಳುವಿಕೆ ವೊರಟು ಕೆತ್ತನೆ ಮತ್ತು ಅದೇ ವಿಷಯಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮಾಡುವ ರೂಲ್ಸ್ ನುತ್ತು ಕಾನೂನುಗಳಿಗೆ ಕಂಟ್ರಾಕ್ಟ್‌ದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವು ಫಾರೆಸ್ಟ್ ಕ್ಷರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

11. ವುದ್ದೇಶಿಸುವ ಕಂಟ್ರಾಕ್ಟುದಾರನು ಅವೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಫಾರೆಸ್ಟ್ ಇಲಾಖೆ.

ನೋಟಿಫಿಕೇಷ್ಟ್.

ತಾರೀಖು 13ನೇ ಡಿಸೆಂಬರ್ 1895.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ಮೆಂಟ್ ಫಾರೆಸ್ಟ್ ವ ಪ್ರೈವೇಟ್ಸೆಕ್ಷನ್‌ಗಳು ಪಿಕಾರಿ ಮತ್ತು ಇತರ ಬ್ಯೂಟೆಗಳಿಗೆ 1896ನೇ ಇಸವಿ ಮೇ ಆಖೈರ್ ವರೆಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ರೈವೇಟ್ಸೆಕ್ಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ರೈವೇಟ್ಸೆಕ್ಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ರೈವೇಟ್ಸೆಕ್ಷ
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆರಿ ಪ್ರೊಡಕ್ಟಿವ್ ಬ್ಲಾಕ್
	ಅನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ವಾರೀಗುಡಿ ಡಿಟೋ
	ಕಾಕನಕೋಟೆ ಪ್ರೈವೇಟ್ಸೆಕ್ಷ
	ಮಾಸ್ತಿಗುಡಿ ಡಿಟೋ
	ಮಂಚಗವುಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ರೈವೇಟ್ಸೆಕ್ಷ
	ಹೊಂಗಹಳ್ಳಿ ಸಂದಲ್ ಪ್ರೈವೇಟ್ಸೆಕ್ಷ
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ಟಿ. ಅಬ್ದುಲ್‌ಕರೀಂ, ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.